ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 01-02-1980.

# *ಸೂಕ್ಷ್ಮ ವತನದ ಕಾರೋಬಾರು*

(सूक्ष्म वतन की कारोबार)

ಇಂದು ವಿಶೇಷವಾಗಿ ಭಾವನೆಯಿರುವಂತಹ ಮಕ್ಕಳೊಂದಿಗೆ ಭೇಟಿಯಾಗಲು ಬಂದಿದ್ದಾರೆ. ಎಷ್ಟು ಭಾವನೆಯಿರುವವರೋ ಅಷ್ಟೇ ಭಾಗ್ಯವಂತರೂ ಆಗಿದ್ದಾರೆ. ಭಾಗ್ಯವಂತ ಮಕ್ಕಳೊಂದಿಗೆ ಭಾಗ್ಯವಿದಾತ ತಂದೆಯು ಮಿಲನ ಮಾಡುವುದಕ್ಕಾಗಿ ಬಂದಿದ್ದಾರೆ. ಬಾಪ್‌ದಾದಾರವರ ಬಳಿ ಸರ್ವಮಕ್ಕಳ ಭಾವನೆ, ಸ್ನೇಹ ಮತ್ತು ಸೇವೆಯ ಪೂರ್ಣ ಚಾರ್ಟ್ ಇರುತ್ತದೆ. ಹೇಗೆ ಹಳೆಯ ಪ್ರಪಂಚದ ಸೈನ್ಯಾಧಿಕಾರಿಯ ಬಳಿ ತನ್ನ ಪ್ರಾಂತ್ಯದ ಹಾಗೂ ಸೈನ್ಯದ ಚಾರ್ಟ್ ಅಥವಾ ನಕ್ಷೆಯಿರುತ್ತದೆಯೋ, ಹಾಗೆಯೇ ತಂದೆಯ ಬಳಿಯೂ ಸಹ ಪ್ರತಿಯೊಂದು ಸೇವಾಸ್ಥಾನ ಮತ್ತು ಸೇವಾಧಾರಿಗಳ ಚಾರ್ಟ್ ಹಾಗೂ ನಕ್ಷೆಯಿದೆ. ಆ ಚಾರ್ಟಿನ ಮೂಲಕ ಪ್ರತಿಯೊಂದು ಸ್ಥಾನ ಮತ್ತು ಸೇವಾಧಾರಿಗಳ ಪ್ರತಿಯೊಂದು ಸಮಯದ ಸೇವೆಯ ವಿಧಿ ಮತ್ತು ಪುರುಷಾರ್ಥದ ಗತಿಯೆರಡನ್ನೂ ಒಂದು ಸ್ಥಾನದಲ್ಲಿಯೇ ಕುಳಿತಿರುತ್ತಾ ನೋಡುತ್ತಿರುತ್ತಾರೆ. ಪ್ರತಿಯೊಂದು ಮಗುವಿನ ಇಡೀ ದಿನದಲ್ಲಿ ಈ ಸ್ಥಿತಿಯು ಬದಲಾಗುತ್ತಿರುತ್ತದೆಯೇ ಅಥವಾ ಏಕರಸ ಸ್ಥಿತಿಯಲ್ಲಿ ಇರುತ್ತದೆಯೇ - ಆ ಭಿನ್ನ-ಭಿನ್ನ ಸ್ಥಿತಿಗಳು ಸ್ಪಷ್ಟವಾಗಿ ಸಾಕ್ಷಾತ್ಕಾರವಾಗುತ್ತಿರುತ್ತದೆ. ಸೂಕ್ಷ್ಮ ವತನದ ಎಲ್ಲಾ ಕಾರೋಬಾರು ಯಾವ ಶಕ್ತಿಯಿಂದ ನಡೆಯುತ್ತದೆ? ಹೇಗೆ ಇಲ್ಲಿ ಭಿನ್ನ ಭಿನ್ನ ಸಾಧನಗಳ ಮೂಲಕ ಕಾರೋಬಾರು ನಡೆಯುತ್ತದೆಯೋ ಹಾಗೆಯೇ ಸತ್ಯಯುಗದಲ್ಲಿ ವಿಶೇಷವಾಗಿ ಅಟೋಮಿಕ್(ಅಣು ಶಕ್ತಿ) ಎನರ್ಜಿಯಿಂದ ನಡೆಯುತ್ತದೆ. ಸೂಕ್ಷ್ಮ ವತನದ ಕಾರೋಬಾರು ಹೇಗೆ ನಡೆಯುತ್ತದೆ? ಯಾವ ಶಕ್ತಿಯ ಆಧಾರದ ಮೇಲೆ ನಡೆಯುತ್ತದೆ, ಹೇಗೆ ನಡೆಯುತ್ತದೆ ಎಂದು ತಿಳಿದಿದ್ದೀರಾ? ಪ್ರಕಾಶತೆಯ ವತನ ಎಂದಾಗ ಪ್ರಕಾಶತೆಯ ವತನದಲ್ಲಿ ಕಾರೋಬಾರು ಹೇಗೆ ನಡೆಯುತ್ತದೆ? ಪ್ರಕಾಶತೆಯ ಆಧಾರದ ಮೇಲೆ ನಡೆಯುತ್ತದೆಯೇ ಅಥವಾ ಬೇರೆ ಆಧಾರದ ಮೇಲೆ ನಡೆಯುತ್ತದೆಯೇ? ಇಂದು ಪರೀಕ್ಷೆಯನ್ನು ನೋಡುವುದೇ- ಇಂದು ಮಕ್ಕಳು ಇಮರ್ಜ್ ಆಗುತ್ತಾರೆಂದರೆ, ಈ ಭಿನ್ನ-ಭಿನ್ನವಾದ ಕಾರೋಬಾರು ಹೇಗೆ ನಡೆಯುತ್ತವೆ?

ಕರ್ನಾಟಕದವರು ಅಗಲಿಮರಳಿಸಿಕ್ಕಿರುವವರಲ್ಲವೆ. ಅಂದಮೇಲೆ ವಿಶೇಷವಾಗಿ ಗುಹ್ಯರಹಸ್ಯವನ್ನು ತಿಳಿಸಲಾಗುತ್ತದೆ. ಕರ್ನಾಟಕದ ಸೇವೆಯಲ್ಲಿ ಜೋಡಿಯೂ ಸಹ ವಿಶೇಷವಾಗಿ ಮಾಡಲಾಗಿದೆ. ಮಾಡುವವರು ಮತ್ತು ಮಾಡಿಸುವವರಿಬ್ಬರದೇ ಜೋಡಿಯಾಗಿದೆ. ಅವರು ಪ್ರೇಮಸ್ವರೂಪ, ಅವರು ಜ್ಞಾನಸ್ವರೂಪ, ಅವರು ಲವ್ ಮತ್ತು ಲಾಫುಲ್, ಅವರು ಕೇವಲ ಲವ್ ಫುಲ್, ಆದರೂ ಕರ್ನಾಟಕದ ಹೂಗುಚ್ಛವು ಬಹಳ ಚೆನ್ನಾಗಿ ಫಲಿಭೂತವಾಗಿದೆ. ವಿಭಿನ್ನ ಪ್ರಕಾರದ ಸೇವಾಧಾರಿಗಳೂ ಸಹ ಒಳ್ಳೊಳ್ಳೆಯವರಿದ್ದಾರೆ. ಬಾಪ್ ದಾದಾರವರು ಹೇಗೆ ಡಬಲ್ ವಿದೇಶಿಯರ ವಿಶೇಷತೆಯ ಬಗ್ಗೆ ವಿಶೇಷವಾಗಿ ನೆನಪು-ಪ್ರೀತಿಯನ್ನು ಕೊಡುತ್ತಾರೆ. ಭಿನ್ನವಾದ ಧರ್ಮದಲ್ಲಿ ಮತಾಂತರವಾಗಿದ್ದರೂ ಸಹ, ತನ್ನ ಪ್ರಾಚೀನ ಧರ್ಮವನ್ನು ಗುರುತಿಸುವುದರಲ್ಲಿ ಹಾಗೂ ತಮ್ಮದಾಗಿಸಿಕೊಳ್ಳುವುದರಲ್ಲಿ ತೀವ್ರಪುರುಷಾರ್ಥಿಯಾಗಿ ನಡೆಯುತ್ತಿದ್ದಾರೆ. ಮೆಜಾರಿಟಿ ಸ್ನೇಹ ಮತ್ತು ಶಾಂತಿಯ ಪ್ರಾಪ್ತಿಯ ಆಧಾರದಿಂದ ಸಂಶಯಬುದ್ಧಿ ಕಡಿಮೆಯಾಗುತ್ತದೆ. ಇದು ಡಬಲ್ ವಿದೇಶಿಗಳ ವಿಶೇಷತೆಯಾಗಿದೆ. ಈ ವಿಶೇಷತೆಯ ಕಾರಣದಿಂದ ಬಾಪ್‌ದಾದಾರವರು ರಿಟರ್ನ್‌ನಲ್ಲಿ ನೆನಪು-ಪ್ರೀತಿಯನ್ನು ಕೊಡುತ್ತಾರೆ. ಇದೇರೀತಿ ಕರ್ನಾಟಕದವರೂ ಸಹ ಭಾವನೆ ಮತ್ತು ಪ್ರೇಮದಿಂದ ಸಹಜವಾಗಿಯೇ ತಂದೆಯವರಾಗಿ ಬಿಡುತ್ತಾರೆ. ಸ್ನೇಹದ ಕಾರಣ ಮುಗ್ಧರಾಗಿದ್ದಾರೆ. ಹಾಗೆ ನೋಡಿದರೆ ಜ್ಞಾನಪೂರ್ಣರೂ ಆಗಿದ್ದಾರೆ ಆದರೆ ಮೊದಲು ಸ್ನೇಹದ ಕಾರಣದಿಂದ ಸಮೀಪದಲ್ಲಿ ಬಂದುಬಿಡುತ್ತಾರೆ. ಮತ್ತೆ ಜ್ಞಾನವನ್ನು ಕೇಳುತ್ತಾ ಮುಂದುವರೆಯುತ್ತಾರೆ.

ಕೆಲವುಕಡೆ ಧರಣಿ ಜ್ಞಾನದ ಆಧಾರದಿಂದ ಮುಂದೆಬರುತ್ತದೆ, ನಂತರ ಸ್ನೇಹದಲ್ಲಿ ಬರುತ್ತದೆ ಮತ್ತು ಕೆಲವರು ಸ್ನೇಹದಲ್ಲಿ ಬಂದು ನಂತರ ಜ್ಞಾನವನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ ಭೋಲಾನಾಥ ತಂದೆಯ ಪ್ರೀತಿಯಿದೆ. ತಿಳಿಯಿತೆ. ತಮ್ಮೆಲ್ಲರದೂ ಮಹತ್ವವಿದೆ. ನಾವು ಭಾಷೆಯನ್ನು ತಿಳಿದುಕೊಂಡಿಲ್ಲ. ಆದ್ದರಿಂದ ಹಿಂದೆ ಇದ್ದೇವೆ ಎಂದು ಎಂದಿಗೂ ತಿಳಿಯಬಾರದು, ಆದರೆ ಬಾಪ್‌ದಾದಾರವರ ಸಮೀಪದಲ್ಲಂತು ಸದಾ ಇರುತ್ತೀರಿ. ಬಾಪ್‌ದಾದಾರವರು ಭಾಷೆಯನ್ನು ನೋಡುವುದಿಲ್ಲ. ಭಾವನೆಯನ್ನು ನೋಡುತ್ತಾರೆ.

**ವಯರ್ಲೆಸ್ ಮತ್ತು ವಾಯ್ಸ್ ಲೆಸ್.**

ತಾವು ತಿಳಿಸಿರಿ- ಸೂಕ್ಷ್ಮ ವತನದ ಕಾರೋಬಾರು ಹೇಗೆ ನಡೆಯುತ್ತದೆ? ಯಾವ ಆಧಾರದಿಂದ ನಡೆಯುತ್ತದೆ? ಇಲ್ಲಂತು ಪ್ರಕಾಶತೆ(ಕರೆಂಟ್) ಹೊರಟುಹೋದಾಗ, ತಾವು ಸಾಧನಗಳ ಮೂಲಕ ಕಾರ್ಯವನ್ನು ನಡೆಸುತ್ತೀರಲ್ಲವೆ ಇಲ್ಲಂತು ಜನರೇಟರ್ ಇದೆ, ಆದರಿಂದ ಪ್ರಕಾಶತೆಯು ಬರುತ್ತದೆ. ಅಲ್ಲಿ ಏನಿದೆ! ಯಾವ ಶಕ್ತಿಯ ಮೂಲಕ ಕಾರೋಬಾರು ನಡೆಯುತ್ತದೆ? ಆಕಾರವು ಸಾಕಾರನಿಗೆ ಪ್ರೇರೇಪಿಸುತ್ತಿದೆಯೇ ಅಥವಾ ಸಾಕಾರವು ಆಕಾರನನ್ನು ಪ್ರೇರೇಪಿಸುತ್ತದೆಯೇ? ಹೇಳಿರಿ- ಕಾರೋಬಾರು ಹೇಗೆ ನಡೆಯುತ್ತದೆ? ವಿಶೇಷವಾಗಿ ಸೂಕ್ಷ್ಮ ವತನದ ಕಾರೋಬಾರು ಶುದ್ಧಸಂಕಲ್ಪದ ಆಧಾರದ ಮೇಲೆ ನಡೆಯುತ್ತದೆ. ಬ್ರಹ್ಮನ ಸಂಕಲ್ಪವಾಯಿತು ಮತ್ತು ಸೃಷ್ಟಿಯ ರಚನೆಯಾಯಿತು ಎಂಬ ಗಾಯನವಿದೆ. ಅಂದಾಗ ಸಂಕಲ್ಪ ಮಾಡಿದರು ಮತ್ತು ಇಮರ್ಜ್ ಆಯಿತು. ಮರ್ಜ್ ಮತ್ತು ಇಮರ್ಜ್ ಆಗುವ ಆಟವಾಗಿದೆ. ರೂಪರೇಖೆಯು ಸನ್ನೆಯದಾಗಿದೆ ಆದರೆ ವಿಶೇಷವಾಗಿ ಆಕಾರಿರೂಪದ ಕಾರೋಬಾರು ಮನೋಬಲವೆಂದು ಹೇಳಿ ಅಥವಾ ಸಂಕಲ್ಪವೆಂದು ಹೇಳಿರಿ, ಇದರ ಆಧಾರದಿಂದಲೇ ನಡೆಯುತ್ತದೆ. ಬಾಪ್‌ದಾದಾರವರು ಸಂಕಲ್ಪದ ಸ್ವಿಚ್‌ನ್ನು ಆನ್ ಮಾಡಿದಾಗ ಎಲ್ಲವೂ ಪ್ರತ್ಯಕ್ಷವಾಗಿಬಿಡುತ್ತದೆ. ತಿಳಿಸಿದೆವಲ್ಲವೆ ಅವರ ಕಾರೋಬಾರು ದೂರ-ದೂರದವರೆಗೆ ವೈರ್‌ಲೆಸ್‌ನ ಮೂಲಕವಿರುತ್ತದೆ ಮತ್ತು ಇಲ್ಲಿ ಮೂರೂಲೋಕದವರೆಗೆ ವೈರ್‌ಲೆಸ್‌ನ ಶಕ್ತಿಯ ಮೂಲಕ ಕನೆಕ್ಷನ್ ಮಾಡಬಹುದು. ಇದರಲ್ಲಿ ಬುದ್ಧಿಯೋಗವು ಸಂಪೂರ್ಣವಾಗಿ ರಿಫೈನ್ ಆಗಿರಬೇಕು. ಸೂಕ್ಷ್ಮ ವತನದವರೆಗೆ ಸಂಕಲ್ಪವು ತಲುಪುವುದಕ್ಕಾಗಿ ಸೂಕ್ಷ್ಮ, ಸರ್ವಸಂಬಂಧಗಳ ಸಾರವಿರುವಂತಹ ನೆನಪಿರಬೇಕಾಗಿದೆ. ಇದು ಎಲ್ಲದಕ್ಕಿಂತ ಶಕ್ತಿಶಾಲಿಯಾಗಿರುವ ತಂತಿ(ಸಂಬಂಧ)ಯಾಗಿದೆ. ಇದರ ಮಧ್ಯದಲ್ಲಿ ಮಾಯೆಯು ಬರಲು ಸಾಧ್ಯವಿಲ್ಲ. ಬಾಪ್‌ದಾದಾರವರ ಅಲ್ಲಿನ ಶೋಭೆಯು ಬಹಳಷ್ಟಿದೆ. ಈ ಪ್ರಪಂಚದ ರೀತಿಯಿಲ್ಲ(ವಿದ್ಯುತ್ ಗಳಿಗೆ ಗಳಿಗೆಯು ಹೊರಟುಹೋಗುತ್ತಿತ್ತು) ಇಡೀ ಕಲ್ಪದಲ್ಲಿ ಸೂಕ್ಷ್ಮ ವತನವು ಈಗಿನ ಸಮಯದಲ್ಲಿಯೇ ಇಮರ್ಜ್ ಆಗುತ್ತದೆ. ಆದ್ದರಿಂದ ಸೂಕ್ಷ್ಮವತನದ ಶೋಭೆಯೂ ಸಹ ಈಗಿದೆ. ನಂತರ ಸ್ವರ್ಗದ ಶೋಭೆಯು ತಮಗಾಗಿ ಇರುವುದು.

**(ಇಲ್ಲಿ ಕುಳಿತು ಸೂಕ್ಷ್ಮವತನದ ಅನುಭವ ಮಾಡಬಹುದೇ?**)

ಅನುಭವವಂತು ಮಕ್ಕಳೇ ಮಾಡುತ್ತಾರೆ. ಈ ವತನವಿರುವುದೇ ಮಕ್ಕಳಿಗಾಗಿ, ಮತ್ಯಾವುದೇ ಆತ್ಮರೂ ಸೂಕ್ಷ್ಮ ವತನದ ಅನುಭವ ಮಾಡಲು ಸಾಧ್ಯವೇ ಏಕೆಂದರೆ ಬ್ರಹ್ಮಾ ಮತ್ತು ಬ್ರಾಹ್ಮಣರದೇ ಸಂಬಂಧವಿದೆ. ಭಕ್ತರು ಕೇವಲ ಕೆಲವು ವಿಶೇಷವಾದ ದೃಶ್ಯದ ಸಾಕ್ಷಾತ್ಕಾರವನ್ನು ಮಾಡಬಹುದು ಆದರೆ ಸೂಕ್ಷ್ಮ ವತನವು ನಮ್ಮ ಮನೆಯಾಗಿದೆ, ಬ್ರಹ್ಮಾತಂದೆಯ ಸ್ಥಾನವು ನಮ್ಮ ಸ್ಥಾನವಾಗಿದೆ. ಸೂಕ್ಷ್ಮ ವತನದ ಅನುಭವ, ಮಿಲನದ ಅನುಭವವನ್ನು ಬ್ರಾಹ್ಮಣರೇ ಮಾಡಬಹುದು.

**(ವಿದೇಶಿಗಳು ಕೆಳಗೆ ಕುಳಿತು ಮುರಳಿಯನ್ನು ಕೇಳುತ್ತಿದ್ದರು)**

ಇಂದು ಡಬಲ್ ವಿದೇಶಿಯರ ಸಂಕಲ್ಪವು ತಲುಪುತ್ತಿದೆ. ಕೆಳಗಿದ್ದರೂ ಸಹ ತಂದೆಯು ಮುಂದೆ ಇದ್ದಾರೆ. ಆದ್ದರಿಂದ ಡಬಲ್ ವಿದೇಶಿಯರಿಗೆ ಬಾಪ್‌ದಾದಾರವರು ವಿಶೇಷವಾಗಿ ನೆನಪು-ಪ್ರೀತಿಯನ್ನು ಕೊಡುತ್ತಿದ್ದಾರೆ. ಜೊತೆಜೊತೆಗೆ ನಾಲ್ಕೂಕಡೆಯಲ್ಲಿನ ಯಾವ ಮಕ್ಕಳು ದೂರವಿದ್ದರೂ ಸಹ ಸಂಕಲ್ಪಶಕ್ತಿಯಿಂದ ಸಮೀಪದ ಅನುಭವ ಮಾಡುತ್ತಿದ್ದಾರೆ, ಅವರ ಸಹಿತವಾಗಿ ಕರ್ನಾಟಕದವರಿಗೂ ವಿಶೇಷವಾದ ನೆನಪು-ಪ್ರೀತಿ ಕೊಡುತ್ತಿದ್ದೇವೆ. ಮಧುಬನದವರಂತು ಇದ್ದೇ ಇರುತ್ತಾರೆ- "ಚುಲೇ ಪರ್ ಸೊ ದಿಲ್ ಪರ್"(ಒಲೆಯ ಮೇಲಿರುವುದು ಹೃದಯದ ಮೇಲೆ), ಮಧುಬನದವರಿಗೆ ಬಿಸಿ-ಬಿಸಿ(ಪ್ರಫುಲ್ಲಿತವಾದ)ಯಾಗಿರುವುದು ಸಿಗುತ್ತದೆ. ಸೇವೆಯಲ್ಲಿ ಅವಿಶ್ರಾಂತರಾಗಿರುವ ಒಳ್ಳೆಯ ಪ್ರತ್ಯಕ್ಷಪ್ರಮಾಣವನ್ನು ಕೊಡುತ್ತಿದ್ದಾರೆ. ಮೆಜಾರಿಟಿಯಲ್ಲಿ ನಿದ್ರಾಜೀತರ ಗುಣವನ್ನೂ ಸಹ ಚೆನ್ನಾಗಿ ತೋರಿಸುತ್ತಿದ್ದಾರೆ. ರಾತ್ರಿಯ ನಿದ್ರೆಯನ್ನು ಬಿಟ್ಟೂ ಸಹ ಸೇವೆಯಲ್ಲಿ ಒಳ್ಳೆಯ ಸಹಯೋಗಿಯಾಗಿದ್ದಾರೆ. ಜೀ ಹಾಜಿರ್ ಮತ್ತು ಜೀ ಹಜೂರ್‌ನ ಪಾತ್ರವನ್ನಭಿನಯಿಸುತ್ತಿದ್ದಾರೆ, ಆದ್ದರಿಂದ ಮಧುಬನದ ಸೇವಾಧಾರಿಗಳಿಗೆ ನಂಬರ್‌ವಾರ್ ಆಗಿ ಸೇವೆಯ ಪ್ರತ್ಯಕ್ಷ ಪ್ರಮಾಣವನ್ನು ತೋರಿಸುವವರಿಗೆ ವಿಶೇಷವಾಗಿ ನೆನಪು ಪ್ರೀತಿಗಳು, ಒಳ್ಳೆಯದು ಎಲ್ಲಾ ಮಕ್ಕಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.

**ಪಾರ್ಟಿಯೊಂದಿಗೆ ಅವ್ಯಕ್ತ ಬಾಪ್‌ದಾದಾರವರು ಮಧುರ ಮಹಾವಾಕ್ಯಗಳು.**

**ಸಫಲತೆಗೆ ಆಧಾರ ಭಿನ್ನವಾಗಿರುವುದು.**

ಎಲ್ಲರೂ ಸದಾ ತಮ್ಮ ವಿಶ್ವಕಲ್ಯಾಣಕಾರಿಯ ಸ್ಥಿತಿಯಲ್ಲಿದ್ದು ಸೇವೆಯ ಪಾತ್ರದಲ್ಲಿ ಬರುತ್ತೀರಾ? ವಿಶ್ವಕಲ್ಯಾಣಕಾರಿ ಅರ್ಥಾತ್ ಬೇಹದ್ದಿನ ಸೇವಾಧಾರಿ, ಯಾವುದೇ ಪ್ರಕಾರದ ಅಲ್ಪಕಾಲದರಲ್ಲಿ ಬರಲು ಸಾಧ್ಯವಿಲ್ಲ. ವಿಶ್ವವು ಬೇಹದ್ದಿನದಾಗಿದೆ ಅಂದಮೇಲೆ ವಿಶ್ವಸೇವಾಧಾರಿ ಅರ್ಥಾತ್ ಬೇಹದ್ದಿನ ಸ್ಥಿತಿಯಲ್ಲಿರುವವರು, ವಿಶ್ವಕಲ್ಯಾಣಕಾರಿಯು ಸದಾ ಸೇವೆಯನ್ನು ಮಾಡುತ್ತಿದ್ದರೂ ಭಿನ್ನ ಹಾಗೂ ಸದಾ ಬಾಬಾರವರಿಗೆ ಪ್ರಿಯವಾಗಿರುತ್ತಾರೆ. ಸೇವೆಯ ಸೆಳೆತದಿಂದಲೂ ಭಿನ್ನವಾಗಿರುತ್ತಾರೆ. ಸೇವೆಯ ಸೆಳೆತವೂ ಸಹ ಚಿನ್ನದ ಪಂಜರವಾಗಿದೆ, ಈ ಬಂಧನವೂ ಸಹ ಬೇಹದ್ದಿನಿಂದ ಹದ್ದಿನಲ್ಲಿ ತೆಗೆದುಕೊಂಡು ಬರುತ್ತದೆ. ಆದ್ದರಿಂದ ಸದಾ ಸೇವೆಯಲ್ಲಿ ಭಿನ್ನ ಹಾಗೂ ತಂದೆಗೆ ಪ್ರಿಯರಾಗಿ ನಡೆಯಬೇಕು. ಇಂತಹ ಸ್ಥಿತಿಯಲ್ಲಿರುವವರು ಸದಾ ಸಫಲತಾ ಮೂರ್ತಿಯಾಗಿರುತ್ತಾರೆ.

**ಸಫಲತೆಯ ಸಹಜ ಸಾಧನವಾಗಿದೆ- 'ಭಿನ್ನ ಹಾಗೂ ಪ್ರಿಯರಾಗುವುದು'**

ಎಲ್ಲಿಯೇ ಸಫಲತೆಯ ಕೊರತೆ ಇದ್ದಾಗ, ಅದರ ಕಾರಣವಾಗಿದೆ. ಭಿನ್ನವಾಗುವ ಕೊರತೆ. ಭಿನ್ನತೆ ಅರ್ಥಾತ್ ದೇಹದ ಸ್ಮೃತಿಯಿಂದಲೂ ಭಿನ್ನ, ಈಶ್ವರೀಯ ಸಂಬಂಧದ ಸೆಳೆತದಿಂದಲೂ ಭಿನ್ನ ಮತ್ತು ಈಶ್ವರೀಯ ಸೇವೆಯ ಸಾಧನಗಳ ಸೆಳೆತದಿಂದಲೂ ಭಿನ್ನವಾಗಿರುವುದು. ಯಾವಾಗ ಇಂತಹ ಭಿನ್ನತನವು ಕಡಿಮೆಯಿರುತ್ತದೆಯೋ, ಆಗ ಸಫಲತೆಯ ಕೊರತೆಯಾಗುತ್ತದೆ. ಅಂದಮೇಲೆ ಸದಾ ಸಫಲತಾ ಮೂರ್ತಿಯೆಂದು ತಿಳಿಯುತ್ತೀರಾ? ಅಥವಾ ತಮ್ಮನ್ನು ಚಿಕ್ಕವರೆಂದು ತಿಳಿಯುತ್ತೀರಾ? ಯಾವಾಗ ಯಾವುದೇ ಆದೇಶವು ಸಿಗುತ್ತದೆಯೆಂದರೆ, ಆ ಆದೇಶವನ್ನು ಪ್ರತ್ಯಕ್ಷದಲ್ಲಿ ತರುವ ಸಮಯದಲ್ಲಿ ಚಿಕ್ಕವರೆಂದು ತಿಳಿಯುವುದು ಸರಿಯಿದೆ ಮತ್ತು ಸೇವೆ ಮಾಡುವುದರಲ್ಲಿ ದೊಡ್ಡವರಾಗಿ ಸೇವೆಯನ್ನು ಮಾಡಿರಿ. ಆದೇಶದ ಸಮಯದಲ್ಲಿ ಚಿಕ್ಕವರೆಂದು ತಿಳಿದಾಗ ಸದಾ ಸಫಲರಾಗುತ್ತೀರಿ. ದೊಡ್ಡವರು ಅರ್ಥಾತ್ ಬೇಹದ್ದಿನ ವೃತ್ತಿಯವರು. ತಿಳಿಯಿತೆ!

ಸದಾ ಸಂತುಷ್ಟವಾಗಿದ್ದೀರಾ? ಏನಾದರೂ ಇರಬಹುದು, ಯಾವುದೇ ಮಾತು ಹೃದಯದಲ್ಲಿ ಬಂದಾಗ ಅದನ್ನು ತಿಳಿಸುವುದರಲ್ಲಿ ಪರವಾಗಿಲ್ಲ ಆದರೆ ತಿಳಿಸಿದನಂತರ, ದೊಡ್ಡವರ ನಿರ್ದೇಶನವೇನಿದೆಯೋ ಅದರಂತೆ ನಡೆಯುವುದಕ್ಕಾಗಿ ಸದಾ ತಯಾರಾಗಿರಬೇಕು. ತಿಳಿಸಿದಿರೆಂದರೆ ತಮ್ಮ ಜವಾಬ್ದಾರಿಯು ಸಮಾಪ್ತಿಯಾಯಿತು, ನಂತರ ದೊಡ್ಡವರ ಜವಾಬ್ದಾರಿಯಾಗಿಬಿಡುತ್ತದೆ. ಆದ್ದರಿಂದ ತಿಳಿಸುವುದು ಅವಶ್ಯವಿದೆ ಆದರೆ ಜೊತೆಜೊತೆಯಲ್ಲಿ ನಿರ್ದೇಶನದಂತೆ ನಡೆಯುವುದೂ ಅವಶ್ಯಕತೆಯಿದೆ. ಯಾವುದೇ ಮಾತನ್ನು ಒಳಗಿಟ್ಟುಕೊಳ್ಳಬಾರದು. ತಿಳಿಸುತ್ತಾ ಹಗುರವಾಗಿಬಿಡಬೇಕು, ಇಲ್ಲವೆಂದರೆ ಯಾವುದೇ ಮಾತು ಒಳಗಿರುತ್ತದೆಯೆಂದರೆ ಅದು ಸೇವೆಯಲ್ಲಿ ಅಥವಾ ಸ್ವ-ಉನ್ನತಿಯಲ್ಲಿ ಪದೇ-ಪದೇ ವಿಘ್ನರೂಪವಾಗಿಬಿಡುತ್ತದೆ. ಆದ್ದರಿಂದ ಹಗುರರಾಗಿರುವುದೂ ಸಹ ಅವಶ್ಯಕವಾಗಿದೆ. ನಿರ್ದೇಶನವು ಸಿಕ್ಕಿತು, ಅದನ್ನು ಧಾರಣೆಯಲ್ಲಿ ತರಲಾಯಿತು ಮತ್ತು ಹಗುರವಾಗಿಬಿಡಬೇಕು, ಇದಕ್ಕಾಗಿ ಎಂತಹ ವಿಶೇಷ ಶಕ್ತಿಯು ಬೇಕಾಗಿದೆ? ಸ್ವಯಂನ್ನು ಪರಿವರ್ತನೆ ಮಾಡಿಕೊಳ್ಳುವ ಶಕ್ತಿ. ಒಂದು ವೇಳೆ ಪರಿವರ್ತನೆ ಮಾಡಿಕೊಳ್ಳುವ ಶಕ್ತಿಯಿದ್ದಾಗ ಎಲ್ಲಿದ್ದರೂ ಸಫಲರಾಗುತ್ತೀರಿ. ಸದಾ ಸ್ವಪರಿವರ್ತನೆಯ ಲಕ್ಷ್ಯವನ್ನಿಡಬೇಕಾಗಿದೆ. ಅನ್ಯರು ಬದಲಾದರೆ ನಾನು ಬದಲಾಗುವೆನು ಎನ್ನುವಂತಿರಬಾರದು. ಅನ್ಯರು ಬದಲಾಗಲಿ ಅಥವಾ ಬದಲಾಗದೇ ಇರಲಿ, ನಾನು ಬದಲಾಗಬೇಕು. 'ಹೇ ಅರ್ಜುನ' ನಾನಾಗಬೇಕು. ಅನ್ಯರು ಅರ್ಜುನರಾಗಲಿ ಅಥವಾ ಆಗದಿರಲಿ, ಸದಾ ಪರಿವರ್ತನೆ ಮಾಡಿಕೊಳ್ಳುವುದರಲ್ಲಿ 'ಮೊದಲು ನಾನು' ಯಾವಾಗ ಇದರಲ್ಲಿ 'ಮೊದಲು ನಾನು' ಮಾಡುವೆನೆಂದರೆ ಎಲ್ಲರಲ್ಲಿಯೂ ಮೊದಲ ನಂಬರಿನವರಾಗುತ್ತೀರಿ.

ತಮ್ಮನ್ನು ಮೌಲ್ಡ್ ಮಾಡುವುದು ಅರ್ಥಾತ್ ರಿಯಲ್ ಗೋಲ್ಡ್ ಆಗುವುದಾಗಿದೆ. ಅನ್ಯರನ್ನು ಮೌಲ್ಡ್ ಮಾಡುವುದು ಅರ್ಥಾತ್ ಮಿಕ್ಸ್ಡ್ ಗೋಲ್ಡ್ ಆಗುವುದು. ಅಂದಮೇಲೆ ಎಲ್ಲರೂ ರಿಯಲ್ ಗೋಲ್ಡ್ ಆಗಿದ್ದೀರಾ? ರಿಯಲ್ ಆಗಿರುವುದರ ಮೌಲ್ಯವಿರುತ್ತದೆ, ಮಿಕ್ಸ್ ಆಗಿರುವುದಕ್ಕೆ ಮೌಲ್ಯವು ಕಡಿಮೆಯಾಗಿಬಿಡುತ್ತದೆ. ಆದ್ದರಿಂದ ಸದಾ ತಮ್ಮನ್ನು ರಿಯಲ್ ಗೋಲ್ಡ್‌ನ ಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕಾಗಿದೆ.

ಯಾವ ಮಕ್ಕಳು ಜನ್ಮದಿಂದಲೂ ವಿಶೇಷವಾಗಿ ಯಾವುದೇ ಬಲಹೀನತೆಯನ್ನು ಟಚ್ ಮಾಡಿಲ್ಲ. ಅವರು ಜನ್ಮದಿಂದಲೂ ವೈಷ್ಣವರಾದರು. ಕೆಲಕೆಲವು ಮಕ್ಕಳು ಜನ್ಮದಿಂದ ಸಾತ್ವಿಕ ಸಂಸ್ಕಾರದವರಾಗಿರುತ್ತಾರೆ. ಕೆಲವರು ರಜೋಗುಣಿಯಿಂದ ಸಾತ್ವಿಕವಾಗುತ್ತಾರೆ. ಕೆಲವರು ತಮೋಗುಣಿಯಿಂದ ರಜೋಗುಣಿಯಾಗುತ್ತಾರೆ. ಕೆಲವರು ಮೂರರಲ್ಲಿಯೂ ಮಿಕ್ಸ್ ನಡೆಯುತ್ತಾರೆ. ಜನ್ಮದಿಂದ ವೈಷ್ಣವ ಅರ್ಥಾತ್ ಸದಾ ಸುರಕ್ಷಿತವಾಗಿರುವುದು.

1. ತ್ರಿಕಾಲದರ್ಶಿ ಸ್ಥಿತಿಯಲ್ಲಿ ಸ್ಥಿತರಾಗಿರುವುದರಿಂದ ವ್ಯರ್ಥದ ಖಾತೆಯು ಸಮಾಪ್ತಿ- ಎಲ್ಲರೂ ತಮ್ಮನ್ನು ಪದಮಾಪದಮ್ ಭಾಗ್ಯಶಾಲಿಯೆಂದು ತಿಳಿಯುತ್ತಾ, ಪ್ರತಿಯೊಂದು ಸಂಕಲ್ಪ ಹಾಗೂ ಕರ್ಮವನ್ನು ಮಾಡುತ್ತಿರುತ್ತೀರಾ? ಶ್ರೇಷ್ಠಸಂಕಲ್ಪ, ಮಾತು ಹಾಗೂ ಕರ್ಮದ ಜೊತೆಜೊತೆಗೆ ವ್ಯರ್ಥ ಮತ್ತು ಸಮರ್ಥ, ಎರಡೂ ಒಟ್ಟಿಗೆಯಿರುವುದಿಲ್ಲವೇ? ಈಗೀಗ ವ್ಯರ್ಥ, ಈಗ ಸಮರ್ಥ- ಇಂತಹ ಆಟವಂತು ನಡೆಯುವುದಿಲ್ಲವೇ? ವ್ಯರ್ಥವು ಒಂದು ಸೆಕೆಂಡಿನಲ್ಲಿ ಪದಮಗಳ ನಷ್ಟವನ್ನುಂಟು ಮಾಡುತ್ತದೆ. ಸಮರ್ಥವು ಒಂದು ಸೆಕೆಂಡಿನಲ್ಲಿ ಪದಮಗಳ ಸಂಪಾದನೆಯನ್ನು ಮಾಡಿಸುತ್ತದೆ. ಸೆಕೆಂಡಿನ ವ್ಯರ್ಥವೂ ಸಂಪಾದನೆಯಲ್ಲಿ ಬಹಳಷ್ಟು ನಷ್ಟವನ್ನಾಕುತ್ತದೆ. ಹೇಗೆ ಸಂಪಾದನೆಯು ಖಾತೆಯಲ್ಲಿ ಜಮಾ ಆಗುತ್ತದೆ, ಹಾಗೆಯೇ ನಷ್ಟದ ಖಾತೆಯೂ ಜಮಾ ಆಗುತ್ತದೆ. ನಷ್ಟದ ಖಾತೆಯು ಹೆಚ್ಚಾದಾಗ  ಸಂಪಾದನೆಯು ಅದರಲ್ಲಿ ಬಚ್ಚಿಟ್ಟುಕೊಳ್ಳುತ್ತದೆ. ಅಂದಮೇಲೆ ವ್ಯರ್ಥವು ಸಮಾಪ್ತಿಯಾಯಿತೆ ಅಥವಾ ಈಗೀಗ ಜೊತೆಯಿದೆಯೇ. ತ್ರಿಕಾಲದರ್ಶಿ ಸ್ಥಿತಿಯಲ್ಲಿ ಸ್ಥಿತರಾದಾಗ ವ್ಯರ್ಥವು ಸಹಜವಾಗಿಯೇ ಸಮಾಪ್ತಿಯಾಗಿಬಿಡುತ್ತದೆ. ತ್ರಿಕಾಲದರ್ಶಿ ಸ್ಥಿತಿಯಿಂದ ಕೆಳಗೆ ಬಂದು, ಒಂದೇ ಕಾಲದರ್ಶಿಯಾಗಿ ಕರ್ಮವನ್ನು ಮಾಡಿದಾಗ ವ್ಯರ್ಥವಾಗುತ್ತದೆ. ಅಂದಮೇಲೆ ಯಾರಾಗಿದ್ದೀರಿ? ತ್ರಿಕಾಲದರ್ಶಿಯಾಗಿದ್ದೀರಾ ಅಥವಾ ಒಂದು ಕಾಲ ದರ್ಶಿಯೇ?

ಯಾರು ಸದಾ ಅಚಲ-ಅಡೋಲವಾಗಿದ್ದು ಶ್ರೇಷ್ಠಪಾತ್ರವನ್ನು ಅಭಿನಯಿಸುವವರಾಗಿದ್ದಾರೆ, ಅವರಿಗೆ ವಿಶೇಷ ಪಾತ್ರಧಾರಿಯೆಂದು ಹೇಳಲಾಗುತ್ತದೆ. ವಿಶೇಷ ಪಾತ್ರಧಾರಿಯಾಗಿದ್ದೀರಾ ಅಥವಾ ಸಾಧಾರಣವೇ? ವಿಶೇಷ ಪಾತ್ರಧಾರಿಯ ವಿಶೇಷ ಗುಣವಾಗಿದೆ- ಸ್ವ-ಸೇವೆ ಮತ್ತು ವಿಶ್ವ- ಸೇವೆಯೆರಡರಲ್ಲಿ ಸಮತೋಲನವಿರುವುದು.

2. ದೇಹ ಮತ್ತು ದೇಹದ ಸಂಬಂಧಗಳಲ್ಲಿ ನಷ್ಟಮೋಹಿಯಾಗಿರಿ- ಹಳೆಯ ಪ್ರಪಂಚದಲ್ಲಿರುತ್ತಾ ತಮ್ಮನ್ನು ಸಂಗಮಯುಗೀ ಬ್ರಾಹ್ಮಣರೆಂದು ತಿಳಿದುಕೊಂಡು ನಡೆಯುತ್ತೀರಾ? ಸಂಗಮಯುಗೀ ಬ್ರಾಹ್ಮಣರು ಕಲಿಯುಗೀ ಸೃಷ್ಟಿಯಿಂದ ದೂರವಾಗಿ ಬಿಟ್ಟಿದ್ದಾರೆ ಆದ್ದರಿಂದ ಅವರ ಕಣ್ಣುಗಳು ಎಂದಿಗೂ ಹಳೆಯ ಪ್ರಪಂಚದ ಕಡೆಗೆ ಹೋಗಲು ಸಾಧ್ಯವಿಲ್ಲ. ಹಳೆಯ ಪ್ರಪಂಚ, ಹಳೆಯ ದೇಹ ಅಥವಾ ಸಂಬಂಧಿ, ಯಾವುದೇ ಕಡೆಗೂ ಆಕರ್ಷಣೆಯಿರಬಾರದು. ಹಾಗೆಯೇ ಸರ್ಕಾರದ ಪಾಸ್‌ಪೋರ್ಟ್ ಇಲ್ಲದೆಯೇ ಅನ್ಯದೇಶದಲ್ಲೇನಾದರೂ ಹೊರಟು ಹೋಗುತ್ತಾರೆ ಎಂದರೆ ಬಂಧಿತರನ್ನಾಗಿ ಮಾಡಿಬಿಡುತ್ತಾರೆ, ಇಲ್ಲಿಯೂ ಸಹ ಯಾವಾಗ ತಂದೆಯ ಅನುಮತಿಯಿಲ್ಲವೋ, ಆಗ ಒಂದು ವೇಳೆ ಅನುಮತಿಯಿಲ್ಲದೆಯೇ ಹೋದರೆ, ಮಾಯೆಯು ಬಂಧಿತರನ್ನಾಗಿ ಮಾಡಿಬಿಡುತ್ತದೆ. ಎಂದಿಗೂ ದೇಹದ ಸಂಬಂಧದ ಸ್ಮೃತಿಯಂತು ಬರುವುದಿಲ್ಲವೇ? ನಷ್ಟಮೋಹಿ ಆಗಿದ್ದೀರಾ? ಒಂದು ವೇಳೆ ಸ್ವಲ್ಪ ಏನಾದರೂ ಮೋಹವಿದೆಯೆಂದರೆ, ಉದಾ: ಮೊಸಳೆಯು ಮೊದಲು ಸ್ವಲ್ಪ ಹಿಡಿದುಕೊಳ್ಳುತ್ತದೆ ನಂತರ ಸಂಪೂರ್ಣವಾಗಿ ತೆಗೆದುಕೊಳ್ಳುತ್ತದೆಯೋ ಹಾಗೆಯೇ ಮಾಯೆಯೂ ಸಹ ಸಂಪೂರ್ಣವಾಗಿ ನುಂಗಿಬಿಡುತ್ತದೆ. ಆದ್ದರಿಂದ ಸ್ವಲ್ಪವೂ ಮೋಹವಿರಬಾರದು. ಸದಾ ನಿರ್ಮೋಹಿಯಾಗಿರಬೇಕು.

3. ಸೇವಾಧಾರಿ ಸಹೋದರ-ಸಹೋದರಿಯರೊಂದಿಗೆ:- ತಮ್ಮ ಅನೇಕ ಜನ್ಮಗಳ ಸಂಪಾದನೆಯನ್ನು ಜಮಾ ಮಾಡಿಕೊಂಡು ಹೋಗುತ್ತಿದ್ದೀರಾ? ಮಧುಬನ ಅರ್ಥಾತ್ ವರದಾನದ ಭೂಮಿಯಾಗಿದೆ. ವರದಾನ ಭೂಮಿಯಿಂದ ವರದಾನಗಳ ಜೋಳಿಗೆಯನ್ನು ತುಂಬಿಕೊಂಡು ಹೋಗುತ್ತಿದ್ದೀರಾ? ಅನೇಕ ಜನ್ಮಗಳಿಗಾಗಿ ಜಮಾ ಮಾಡಿಕೊಂಡಿದ್ದೀರಾ? ಇಲ್ಲಿನ ವಾತಾವರಣ, ಇಲ್ಲಿನ ಅನುಭವವನ್ನು ಸದಾ ಜೊತೆಯಲ್ಲಿ ಇಟ್ಟುಕೊಂಡಿರುತ್ತೀರಾ ಅಥವಾ ಒಂದು ವರ್ಷ, ಅರ್ಧವರ್ಷದವರೆಗೆ ಜೊತೆಯಲ್ಲಿಟ್ಟುಕೊಳ್ಳುತ್ತೀರಾ? ಸದಾ ಇದೇ ವಾಯುಮಂಡಲವನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳುತ್ತಾ, ಸ್ವಯಂನ್ನು ಸಮರ್ಥವನ್ನಾಗಿ ಮಾಡಿಕೊಳ್ಳಬೇಕು. ವಾತಾವರಣವು ಹೇಗಾದರೂ ಇರಲಿ ಆದರೆ ಸ್ಮೃತಿಯು ಸಮರ್ಥವಾಗಿದಿದ್ದಾಗ ವಾತಾವರಣವನ್ನೂ ಪರಿವರ್ತನೆ ಮಾಡಿಬಿಡುತ್ತೀರಿ. ಇಂತಹ ಮಹಾವೀರರಾಗಿದ್ದು ಹೋಗುತ್ತಿದ್ದೀರಲ್ಲವೆ? ಅಥವಾ ಸ್ವಲ್ಪ ಸಮಯದ ನಂತರ 'ಮಾಯೆಯು ಬಂದುಬಿಟ್ಟಿತು' ಎಂದು ಪತ್ರವನ್ನು ಬರೆಯುತ್ತೀರಾ! ವಾಯುಮಂಡಲವನ್ನು ಪರಿವರ್ತನೆ ಮಾಡುವವರಾಗಿದ್ದೀರಿ, ವಾಯು ಮಂಡಲದಲ್ಲಿ ಪರಿವರ್ತನೆಯಾಗುವವರು ಆಗಬಾರದು. ಎಲ್ಲಾ ಮಹಾವೀರರು ತಮ್ಮ ಸಂಗದ ರಂಗನ್ನು ಅನ್ಯರಿಗೂ ಹಾಕುತ್ತಿರಬೇಕು, ಅಂದಮೇಲೆ ಎಲ್ಲಿಯೇ ಹೋಗುತ್ತಿರಿ ಅಲ್ಲಿ ಜಾಗೃತಜ್ಯೋತಿಯ ಕಾರ್ಯವನ್ನು ಮಾಡುತ್ತಿರಿ. ಸದಾ ಜಾಗೃತರಾಗಿದ್ದು ಅನ್ಯರನ್ನೂ ಜಾಗೃತಗೊಳಿಸಿರಿ.

4. ವಿದೇಶಿ ಸಹೋದರ-ಸಹೋದರಿಯರೊಂದಿಗೆ:- ಎಲ್ಲರೂ ತಮ್ಮನ್ನು ಲೈಟ್ ಹೌಸ್ ಎಂದು ತಿಳಿಯುತ್ತೀರಾ? ಲೈಟ್‌ಹೌಸ್‌ನ ಕಾರ್ಯವಾಗಿದೆ. - ಎಲ್ಲರಿಗೂ ಮಾರ್ಗವನ್ನು ತೋರಿಸುವುದು. ಅಂದಮೇಲೆ ಲೈಟ್ ಹೌಸ್ ಆಗಿ ಹಾಗು ಮೈಟ್ ಹೌಸ್ ಆಗಿ ಹೋಗುತ್ತಿದ್ದೇವೆಂದು ತಿಳಿಯುತ್ತೀರಾ. ಅಲೆಯುತ್ತಿರುವ ಯಾವುದೇ ಪ್ರಕಾರದ ಆತ್ಮನಿಗೂ ಸಹಜವಾಗಿ ಯಥಾರ್ಥವಾದ ಗುರಿಯನ್ನು ತೋರಿಸುವುದಕ್ಕಾಗಿ ಹೋಗುತ್ತಿದ್ದೀರಿ, ಇದ್ದಕಾಗಿ ವಿಶೇಷವಾಗಿ ಎರಡು ಮಾತುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. 1. ಸದಾ ಪರಿಶೀಲನೆಯ ಶಕ್ತಿಯನ್ನು ಧಾರಣೆ ಮಾಡಿಕೊಂಡು, ಆತ್ಮನ ಬಯಕೆಯನ್ನು ಪರಿಶೀಲಿಸುವುದು. ಯೋಗ್ಯವಾದ ಡಾಕ್ಟರ್ ಎಂದು ನಾಡಿಯನ್ನು ತಿಳಿದವರಿಗೇ ಹೇಳಲಾಗುತ್ತದೆ. ಅಂದಮೇಲೆ ಪರಿಶೀಲನಾ ಶಕ್ತಿಯನ್ನು ಸದಾ ಉಪಯೋಗಿಸುತ್ತಿರಬೇಕು. ಇನ್ನೊಂದು ಮಾತು ಸದಾ ತಮ್ಮ ಬಳಿ ಸರ್ವ ಖಜಾನೆಗಳ ಅನುಭವವನ್ನು ಕಾಯಂ ಆಗಿಟ್ಟುಕೊಳ್ಳುವುದು. ಸರ್ವ ಖಜಾನೆಗಳ ಅನುಭವಿಯು

ಸಹಜವಾಗಿಯೇ ಅನ್ಯರಿಗೆ ಅನುಭವ ಮಾಡಿಸಬಹುದು. ಸದಾ ಈ ಲಕ್ಷ್ಯವನ್ನಿಟ್ಟುಕೊಳ್ಳಿರಿ- ತಿಳಿಸಬಾರದು ಆದರೆ ಅನುಭವ ಮಾಡಿಸಬೇಕಾಗಿದೆ. ಅಂದಮೇಲೆ ಸರ್ವ ಅನುಭವಿ ಮೂರ್ತಿಯಾಗಿದ್ದು ಹೋಗುತ್ತಿದ್ದೀರಾ? ಅನುಭವಿ ಮೂರ್ತಿ, ಸ್ಪೀಕರ್ ಅಲ್ಲ. ಸರ್ವ ಸಂಬಂಧಗಳ, ಸರ್ವ ಶಕ್ತಿಗಳೆಲ್ಲದರ ಅನುಭವವಿದೆ. ಅಂದಮೇಲೆ ಟೈಟಲ್ ಏನಾಗಿಬಿಡುತ್ತದೆ? ಶಕ್ತಿಗಳ ಅನುಭವಿಯ ಟೈಟಲ್ ಆಗಿದೆ "ಮಾಸ್ಟರ್ ಸರ್ವಶಕ್ತಿವಂತ" ಮತ್ತು ಗುಣಗಳ ಅನುಭವಿಯ ಟೈಟಲ್ ಆಗಿದೆ- 'ಗುಣಮೂರ್ತಿ', ಸರ್ವ ಸಂಬಂಧಗಳ ಅನುಭವಿಯ ಟೈಟಲ್ ಆಗಿದೆ- 'ಸರ್ವರ ಸ್ನೇಹಿ', ಅಂದಮೇಲೆ ಎಷ್ಟೊಂದು ಟೈಟಲ್ ಗಳಾಗಿಬಿಟ್ಟವು. ಇವೆಲ್ಲಾ ಟೈಟಲುಗಳನ್ನು ತೆಗೆದುಕೊಂಡು ಹೋಗುತ್ತಿದ್ದೀರಲ್ಲವೆ? ಹೇಗೆ ಆ ವಿದ್ಯೆಯನ್ನು ಓದುವವರು ಅಥವಾ ಯಾವುದೇ ವಿಭಾಗದಲ್ಲಿ ಕಾರ್ಯವನ್ನು ಮಾಡುವವರು ಪದಕ(ಮೆಡಲ್)ಗಳನ್ನು ತೆಗೆದುಕೊಂಡು ಹೋಗುತ್ತಾರೆ, ಅಂದಮೇಲೆ ತಮಗೆ ಎಷ್ಟು ಪದಕಗಳು ಸಿಕ್ಕಿವೆ? ಎಲ್ಲಾ ಪದಕಗಳನ್ನು ತೆಗೆದುಕೊಂಡಿದ್ದೀರಾ? ಎಷ್ಟು ಹೆಚ್ಚಿನ ಪದಕಗಳಿರುತ್ತವೆಯೋ, ಎಲ್ಲರ ಗಮನವೂ ಅಲ್ಲಿಗೆ ಹೋಗುತ್ತದೆಯಲ್ಲವೆ. ಹಾಗೆಯೇ ತಮ್ಮ ಮಸ್ತಕದಿಂದ, ನಯನಗಳಿಂದ ಕಂಡು ಬರಲಿ - ಇವರು ಸರ್ವಪ್ರಾಪ್ತಿ ಸ್ವರೂಪರಾಗಿದ್ದಾರೆ. ಈ ರೀತಿಯಾಗುತ್ತಾ ಹೋಗುತ್ತಿದ್ದೀರಲ್ಲವೆ?

ಅವ್ಯಕ್ತ ಮುರಳಿ 01-02-1980.

***ಸೂಕ್ಷ್ಮವತನದ ಕಾರೋಬಾರು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

***ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.***

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಂಪೂರ್ಣ ಭಾವನೆಯುಳ್ಳ ಭಾಗ್ಯವಂತ ಮಗುವಾಗಿದ್ದೇನೆ.

2. ನಾನು ಲವ್ ಮತ್ತು ಲಾ ಬ್ಯಾಲೆನ್ಸ್ಡ್ ಸ್ವರೂಪ.

3. ನಾನು ನಿರ್ವಿಕಾರಿ ಸ್ಥಿತಿಯಲ್ಲಿ ಇರುತ್ತಾ ಬುದ್ಧಿಯೋಗವನ್ನು ಪರಿಶುದ್ಧವಾಗಿಸಿಕೊಂಡು ಸಾರಯುಕ್ತ, ಸರ್ವಸಂಬಂಧಗಳ ಸ್ಮೃತಿಯಿಂದ ನನ್ನ ಸಂಕಲ್ಪಗಳು ಸೂಕ್ಷ್ಮವತನದವರೆಗೆ ತಲುಪಿದೆ.

4. ನಾನು ಸೂಕ್ಷ್ಮವತನದ ಪದ್ಧತಿಗಳನ್ನು, ಮಿಲನ ಮಾಡುವ ಸಂತೋಷಕರ (ಖುಷಿಯ) ಅನುಭವವನ್ನು ಮಾಡಿಕೊಂಡಿದ್ದೇನೆ.